ದಿನಾಂಕಃ 05-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎಮ್ ಎಮ್ ಪಿ ವಕೀಲರಿಂದ.

ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ನನ್ನ ಸಾಕ್ಷ್ಯದಲ್ಲಿ ಈಗಾಗಲೇ ಮೋಟಾರು ವಾಹನ ಪರೀಕ್ಷಾ ವರದಿಯನ್ನು ನಿಪಿ-5 ಎಂತಲೂ, ಘಟನಾ ಸ್ಥಳದ ಪಂಚನಾಮೆಯನ್ನು ನಿಪಿ-4 ಎಂದು ಗುರುತಿಸಿಕೊಂಡಿರುತ್ತೇನೆ.

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಖರ್ಚು ಸಹಿತ ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

ಪಾಟೀಸವಾಲುಃ- ಎದುರುದಾರರ ನಂ.**2** ಪರ ಶ್ರೀ. ವಿ ಎಸ್ ಎ ವಕೀಲರಿಂದ.

ಅಪಘಾತವಾದಾಗ ನನಗೆ 43 ವರ್ಷ ವಯಸ್ಸು ಆಗಿತ್ತು ಎಂದರೆ ಸರಿ. ನಾನು ಆಗ ವ್ಯವಸಾಯ ಮಾಡುತ್ತಿದ್ದೆ ಎಂದರೆ ಸರಿ. ನನಗೆ 3 ಎಕರೆ ಬಯಲು ಜಮೀನು ಇರುತ್ತದೆ. ನಾನು ಈಗಲೂ ಸದರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಜಮೀನನ್ನು ಉಳುಮೆಗೆ ಬೇರೆ ಜನರಿಗೆ ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಜಮೀನಿನಲ್ಲಿ ಬೆಳೆ ಬೆಳೆಯಲಾಗುತ್ತದೆ ಎಂದರೆ ಸರಿ. ಅಪಘಾತ ಆಗುವುದಕ್ಕಿಂತ ಪೂರ್ವದಲ್ಲಿ ನಾನು ಹೇಗೆ ದುಡಿದು ರೂ.25 ಸಾವಿರ ಪ್ರತಿ ತಿಂಗಳು ಸಂಪಾದಿಸುತ್ತಿದ್ದೆನು ಅದೇ ರೀತಿ ಅಪಘಾತ ಆದ ನಂತರವು ಸಂಪಾದನೆ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದ ಗಾಯಗಳಿಂದ ಕೆಲಸ ಮಾಡಲಾಗುತ್ತಿಲ್ಲ. ನಾನು ನನಗೆ ದೇಹದ ಅಂಗನೂನ್ಯತೆ ಆಗಿರುತ್ತದೆ ಆದ್ದರಿಂದ ಕೆಲಸ ಮಾಡಲು ಬರುವುದಿಲ್ಲ ಎಂದು ತೋರಿಸಲು ಅಂಗನೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿಲ್ಲ. ಅಪಘಾತವು ಆಟೋ ಚಾಲಕನ ತಪ್ಪಿನಿಂದ ಆಗಿರುತ್ತದೆ. ಅಪಘಾತದ ಕುರಿತು ದೂರನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ. ನಾನು ಅಪಘಾತ ಆಟೋ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಟೋ ಚಾಲಕನ ತಪ್ಪಿ ನಿಂದ

ಅಪಘಾತ ಆಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನ್ನ ಎಡಗಾಲಿನ ಮೂಳೆ ಮುರಿತ ಆಗಿರುತ್ತದೆ. ನಾನು ಅಪಘಾತದ ದಿವಸವೇ ತತ್ವದರ್ಶಿ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ಚಿಕಿತ್ಸೆಗೆ ಸೇರಿಕೆ ಆಗಿರುತ್ತೇನೆ. ಅಲ್ಲಿ 4 ದಿವಸಗಳವರೆಗೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅಲ್ಲಿ ಕ್ಷ-ಕಿರಣ ಪರೀಕ್ಷೆ ಮಾಡಿರುತ್ತಾರೆ. ಅವುಗಳು ಈಗಲೂ ಆಸ್ಪತ್ರೆಯಲ್ಲಿಯೇ ಇರುತ್ತವೆ. ನನಗೆ ಅಪಘಾತದಿಂದ ಮೂಳೆ ಮುರಿತ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತತ್ವದರ್ಶಿ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ಕ್ಷ-ಕಿರಣ ಪರೀಕ್ಷೆ ಮಾಡಿರುವುದಾಗಿ ಹೇಳಿದ್ದು, ಆಗ ಸದರಿ ವರದಿಯಲ್ಲಿ ಮೂಳೆ ಮುರಿತ ಕಂಡು ಬಂದಿಲ್ಲ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಕ್ಷ-ಕಿರಣ ವರದಿಯ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ನನಗೆ ಸಾದಾ ಸ್ವರೂಪದ ಗಾಯ ಉಂಟಾಗಿದ್ದರೂ ನಾನು ಮೂಳೆ ಮುರಿತ ಆಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಟೋ ರಿಕ್ಷಾಗೆ ಎದುರುದಾರ ನಂ.2 ಇವರ ವಿಮೆ ಹೊಣೆಗಾರಿಕೆ ಇರಲಿಲ್ಲ ಎಂದರೆ ಸರಿಯಲ್ಲ. ಆಟೋ ರಿಕ್ಷಾ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಮತ್ತು ಆಟೋ ರಿಕ್ಷಾಗೆ ವಿಮೆ ಇರದೇ ಇದ್ದ ಕಾರಣ ಎದುರುದಾರ ನಂ.2 ನನಗೆ ಪರಿಹಾರ ನೀಡುವ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).